೧೪ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಸಂಧಾರಣಾ ಕಾಯಿದೆಯ ಪ್ರಕಾರ ಹರಿಜನ ಗಿರಿಜನರಿಗೆ ಭೂ ಮಂಜೂರಾತಿ ಮಾಡದೇ ಇರುವುದರಿಂದ ತೊಂದರೆಯುಂಟಾ ಗಿರುವುದು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫಾರ್ಮ್ ನಂಬ್ರ ೫೨ ಯಲ್ಲಿ ಮನೆ ಅಡಿ ಸ್ಥಳಗಳಿಗೆ ಭೂಸುಧಾರಣಾ ಕಾಯಿದೆಯಂತೆ, ಅರ್ಜಿ ಸಲ್ಲಿಸದ ಹರಿಜನ ಗಿರಿಜನ ಹಾಗೂ ಹಿಂದುಳಿದ ಸಾವಿರಾರು ಕುಟುಂಬಗಳಿರುವುವು. ಸದ್ರಿಯವರಿಗೆ ಕಾನೂನಿನ ಅರಿವು ಇಲ್ಲದೆ ಅರ್ಜಿ ಸಲ್ಲಿಸಲು ಬಿಟ್ಟು ಹೋಗಿರುವುದು. ಈಗ ಸದ್ರಿಯವರ ವಾಸ್ತವ್ಯದ ಮನೆ ಅಡಿ ಸ್ಥಳವು, ಮಾಜಿ ಭೂ ಮಾಲೀಕರ ಇಲ್ಲವೆ ೧–೩–೭೪ರ ಭೂಸುಧಾರಣಾ ಕಾಯಿದೆಯಂತೆ ಸರಕಾರಿ ಜಮೀನಾ ಗಿರುತ್ತದೆ. ಅಲ್ಲದೆ, ಈ ರೀತಿಯ ಬಡ ಕೃಷಿ ಕೂಲಿ ಕಾರ್ಮಿಕ ನಿವಾಸಿಗಳಿಗೆ, ಸದ್ರಿ ಮನೆ ಅಡಿ ಸ್ಥಳಗಳನ್ನು ಆಯಾ ತಾಲ್ಲೂಕು ತಹಶೀಲ್ದಾರರು, ಪರಿಶೀಲಿಸಿ, ಮನೆ ನಿವೇಶನ ಮಂಜೂರು ಮಾಡಬಹುದೆಂಬ ಕಾನೂನು ಇದ್ದರೂ, ಇಲಾಖೆಯತಿಯಿಂದ ಸರಿಯಾದ ಕ್ರಮ ಕೈಕೊಳ್ಳದೆ, ಇಂತಹ ಸಾವಿರಾರು ಕುಟುಂಬಗಳು ವಾಸ್ತವ್ಯದ ಮನೆ ನಿವೇಶನ ಮನೆಗಳ ವಿಚಾರದಲ್ಲಿ ಸರಕಾರದ ಯಾವುದೇ ಯೋಜನೆಯ ಸವಲತ್ತುಗಳನ್ನು ಪಡೆದುಕೊಳ್ಳಲು ಸಾಧ್ಯವಿಲ್ಲದೆ ತೊಂದರೆಗೀಡಾಗಿ ದ್ದಾರೆ. ಮತ್ತು ಭೂಸುಧಾರಣಾ ಕಾನೂನಿನಂತೆ ಮಾಜಿ ಗೇಣಿದಾರರಿಗೆ ಜಮೀನು ಮಂಜೂರಾಗಿ ಸರಕಾರಕ್ಕೆ ಸಲ್ಲಿತಕ್ಕ ಹಣವನ್ನು ಪಾವತಿ ಮಾಡಿದ್ದರೂ, ಖಾತೆ ಬದಲಾವಣೆ ಆಗಿ ಹಲವು ವರ್ಷ ಗಳಾದರೂ ಸದ್ರಿ ಜಮೀನುಗಳನ್ನು ಸರ್ವೆ ಇಲಾಖೆಯಿಂದ ಪೋಡು (ಪ್ಲಾಟಿಂಡ್) ಮಾಡುವ ಕಾರ್ಯ ಕ್ರಮಗಳು, ಜಿಲ್ಲೆಯಾದ್ಯಂತ ಸಾವಿರಾರು ಪ್ರಕರಣಗಳು ಬಾಕಿ ಇವೆ. ಅಲ್ಲದೆ, ಪುತ್ತೂರು ಉಪ ವಿಭಾಗ ಸರ್ವೆ ಸೆಟ್ಲ್‌ಮೆಂಟ್ ಕಛೇರಿಯಲ್ಲಿ ಭೂಸುಧಾರಣಾ ಕಾಯಿದೆ ಎಂದು ಮಂಜೂರಾದ ಪೋಜಣಿದಾರರು ಇದ್ದರೂ ಅಲ್ಲಿಯ ಪೋಜಣಿದಾರರುಗಳ ಮತ್ತು ಸೂಪರ್ ವೈಸರುಗಳನ್ನ ನಾಗಮಂಗಲ ಮುಂತಾದ ಕಡೆಗೆ ಕನ್‌ಸಾಲಿಡೇಷನ್ ವರ್ಕ್‌ಗೆ, ಡೆಪ್ಯೂಟೇಷನ್ ಮಾಡುವುದಾಗಿ ಕೂಡ ತಿಳಿದು ಬರುತ್ತದೆ. ಆದುದರಿಂದ ಈ ಮೇಲೆ ಹೇಳಲಾದ ವಿಷಯಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಸದಸ್ಯರು ತಂದಿರುವಂಥ ವಿಷಯದ ಬಗ್ಗೆ ಪರಿಶೀಲನೆ ಮಾಡಿ; ಬೇಗ ಕ್ರಮ ತೆಗೆದುಕೊಳ್ಳುತ್ತೇನೆ.

೧೫ ಉತ್ತರ ಕನ್ನಡ ಜಿಲ್ಲೆಯ ಪಾವಿನಕೂರ್ವೆಯಲ್ಲಿ ಸಮುದ್ರ ಕೊರತವನ್ನು ತಡೆಗಟ್ಟಲು ಕಲ್ಲಿನ ಗೋಡೆಗಳನ್ನು ನಿರ್ಮಿಸುವುದು

ಶ್ರೀ ಎಸ್. ಹೆಚ್. ಗೌಡ.—ಮಾನ್ಯ ಅಧ್ಯಕ್ಷರೇ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಪಾವಿನ ಕೂರ್ವೆ ಎಂಬ ಒಂದು ನತದೃಷ್ಟ ಊರು ಇದೆ, ಇದು ದಕ್ಷಿಣ ಪಶ್ಚಿಮ ಪಶ್ಚಿಮ ದಿಕ್ಕುಗಳಲ್ಲಿ ಅರಬ್ಬೀ ಸಮುದ್ರ ಮತ್ತು ಉತ್ತರ ಮತ್ತು ಪೂರ್ವ ದಿಕ್ಕುಗಳಲ್ಲಿ ಬಡಗಣಿ ಹೊಳೆ ಇವುಗಳಿಂದ ಆವೃತವಾಗಿದ್ದು ಈ ಬಡಗಣಿ ಹೊಳೆಯಂತೂ ಪಾವಿನ ಕೂರ್ವಿನ ಕಣ್ಣೀರಿನ ಹೊಳೆಯಾಗಿದೆ ಈ ಪಾವಿನ ಕೂರ್ವೆಯಲ್ಲಿ ಸುಮಾರು ಒಂದು ಸಾವಿರ ಜನರು ವಾಸಿಸುತ್ತಿದ್ದಾರೆ. ಸುಮಾರು ಐದು ಸಾವಿರಕ್ಕಿಂತಲೂ ಹೆಚ್ಚು ತೆಂಗಿನ ಮರಗಳಿವೆ. ಕಳೆದ ಕೆಲವು ವರ್ಷಗಳಿಂದ ಪಾವಿನ ಕೂರ್ವೆಯು ಸಮುದ್ರ ಮತ್ತು ನದಿಗಳ ಕೊರತದಿಂದ ವರ್ಷಂಪ್ರತಿ ಐದಾರು ಮನೆಗಳು, ನೂರಾರು ತೆಂಗಿನ ಮರಗಳು ಕ್ರೂರ ಹೊಡೆತಕ್ಕೆ ತುತ್ತಾಗುತ್ತಿರುವುದರಿಂದ ಅಲ್ಲಿ ವಾಸಿಸುತ್ತಿರುವ ದುರದೃಷ್ಟ ಅನಾಮಿಕ ಜನರು ತುಂಬ ಭೀತಿಗೊಳಗಾಗಿದ್ದಾರೆ. ಅಲ್ಲಿಯ ಆ ಜನರ ಗೋಳನ್ನು ತಪ್ಪಿಸಲು ಪಾವಿನಕೂರ್ವೆಯಂ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಭದ್ರವಾದ ಕಲ್ಲಿನ ಗೋಡೆ ಯನ್ನು ನಿರ್ಮಿಸುವುದೊಂದೇ ಉಳಿದಿರುವ ಶಾಶ್ವತ ಪರಿಹಾರ. ಈ ಭದ್ರಗೋಡೆಯನ್ನು ಕಟ್ಟಲು ಕನಿಷ್ಟ ೨೫ ಲಕ್ಷ ರೂಪಾಯಿಗಳ ಅಗತ್ಯವಿದೆ. ಅಲ್ಲಿಯ ಜನರ ಬಾಳಿನ ಬವಣೆಯನ್ನು ಅರಿತು ಸರಕಾರ ಅಲ್ಲಿ ಗೋಡೆಯನ್ನು ನಿರ್ಮಿಸುವ ಕಾರ್ಯ ಕೈಗೊಂಡು ಪಾವಿನ ಕೂರ್ವೆಯ ಜನ, ದನ